# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 18(117) |
| ಸದಸ್ಯರ ಹೆಸರು | : | ಶ್ರೀ ಶರವಣ.ಎಂ(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 08.12.2025 |
| ಉತ್ತರಿಸುವ ಸಚಿವರು | : | ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಜೈವಿಕ ವೈದ್ಯಕೀಯ ತ್ಯಾಜ್ಯದ ವಿಲೇವಾರಿ ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುತ್ತದೆ ಎಂಬುದನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (KSPCB) ಹೇಗೆ ಖಚಿತ ಪಡಿಸಿಕೊಳ್ಳುತ್ತದೆ: (ಸಂಪೂರ್ಣ ದತ್ತಾಂಶದ ವಿವರ ನೀಡುವುದು) | ಕರ್ನಾಟಕ ರಾಜ್ಯದಲ್ಲಿ ಆರೋಗ್ಯ ಸಂಸ್ಥೆಗಳು/ಆಸ್ಪತ್ರೆಗಳಲ್ಲಿ ಉತ್ಪತ್ತಿಯಾಗುವ ಜೈವಿಕ ತ್ಯಾಜ್ಯ ವಸ್ತುಗಳನ್ನು ಜೈವಿಕ ವೈದ್ಯಕೀಯ ತ್ಯಾಜ್ಯ ನಿರ್ವಹಣೆ ನಿಯಮ 2016ರಂತೆ ಸಾಮೂಹಿಕ ಜೀವ ವೈಧ್ಯಕೀಯ ತ್ಯಾಜ್ಯ ಸಂಸ್ಕರಣ ಘಟಕಗಳೊಂದಿಗೆ ಒಪ್ಪಂದ ಮಾಡಿಕೊಂಡ ನಂತರ ತ್ಯಾಜ್ಯವನ್ನು ವಿಲೇವಾರಿ ಮಾಡಲು ಷರತ್ತುಬದ್ಧ ನಿಬಂಧನೆಗಳೊಂದಿಗೆ ಖಾತ್ರಿಪಡಿಸಿಕೊಂಡು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅಧಿಕಾರ ಪತ್ರ ನೀಡಲಾಗುತ್ತಿದೆ.<br><br>ಮುಂದುವರೆದು ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿದ ವಾರ್ಷಿಕ ವರದಿಯ ಪ್ರಕಾರ (ಜನವರಿ 2024 ರಿಂದ ಡಿಸೆಂಬರ್ 2024 ವರೆಗೆ) ರಾಜ್ಯದಲ್ಲಿ ಒಟ್ಟಾರೆ ದಿನಂಪ್ರತಿ 74,443 ಕೆಜಿ ಉತ್ಪತ್ತಿಯಾಗುತ್ತಿರುವ ಜೈವಿಕ ವೈದ್ಯಕೀಯ ತ್ಯಾಜ್ಯವನ್ನು ರಾಜ್ಯದಲ್ಲಿ ಸ್ಥಾಪಿತವಾಗಿರುವ ಒಟ್ಟು 27 ಸಾಮೂಹಿಕ ಜೀವ ವೈದ್ಯಕೀಯ ತ್ಯಾಜ್ಯ ಸಂಸ್ಕರಣ ಘಟಕಗಳಲ್ಲಿ ವಿಲೇವಾರಿ ಮಾಡಲಾಗಿರುತ್ತದೆ. |
| (ಆ) | ರಾಜ್ಯದಲ್ಲಿ ಎಷ್ಟು ಆಸ್ಪತ್ರೆಗಳು ಜೈವಿಕ ವೈದ್ಯಕೀಯ ತ್ಯಾಜ್ಯದ ವಿಲೇವಾರಿ ಮಾಡಲು ಸ್ಥಳೀಯ ಸಂಸ್ಕರಣ ಘಟಕಗಳೊಂದಿಗೆ ಒಪ್ಪಂದ ಮಾಡಿಕೊಳ್ಳದ ಆಸ್ಪತ್ರೆಗಳ ಸಂಖ್ಯೆ ಎಷ್ಟು: (ಹೆಸರು ವಿಳಾಸ ನೀಡುವುದು, ಹಾಗೂ ಸದರಿ ಆಸ್ಪತ್ರೆಗಳಿಗೆ ವಿಧಿಸಿದ ಪರಿಸರ ಪರಿಹಾರದ ಮೊತ್ತ ಹಾಗೂ ವಸೂಲಿಮಾಡಿದ ವಿವರ ನೀಡುವುದು) | ಸಾಮೂಹಿಕ ಜೈವಿಕ ತ್ಯಾಜ್ಯ ವಿಲೇವಾರಿ ಘಟಕಗಳೊಂದಿಗೆ ಒಪ್ಪಂದ ಮಾಡಿಕೊಂಡ ನಂತರವೇ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಆಸ್ಪತ್ರೆಗಳಿಗೆ ಸಮ್ಮತಿ ಮತ್ತು ಅಧಿಕಾರ ಪತ್ರವನ್ನು ನೀಡುತ್ತಿರುವ ಕಾರಣ ಒಪ್ಪಂದ ಮಾಡಿಕೊಳ್ಳದ ಆಸ್ಪತ್ರೆಗಳು ಕಂಡು ಬಂದಿರುವುದಿಲ್ಲ. ಈ ವಿಷಯವಾಗಿ ಯಾವುದೇ ಆಸ್ಪತ್ರೆಗಳಿಗೆ ಮಂಡಳಿಯಿಂದ ಪರಿಸರ ಪರಿಹಾರ ಮೊತ್ತ ವಿಧಿಸಿರುವುದಿಲ್ಲ. |
| (ಇ) | ಪರಿಹಾರ ವಸೂಲಿ ಬಾಕಿ ಇರಲು ಕಾರಣಗಳೇನು: (ಆಸ್ಪತ್ರೆವಾರು ಮಾಹಿತಿ ನೀಡುವುದು) | ಉದ್ಭವಿಸುವುದಿಲ್ಲ. |

......2

| | | |
|---|---|---|
| (ಈ) | BMW (Bio Medical Waste) Software ನ್ನು ಮೇಲ್ದರ್ಜೆಗೆ ಏರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ: ಕಳೆದ ಬಾರಿ ಯಾವಾಗ ಸದರಿ Softwareನ್ನು ಮೇಲ್ದರ್ಜೆಗೆ ಏರಿಸಲಾಗಿದೆ: | BMW (Bio Medical Waste) Softwareನ್ನು ಮೇಲ್ದರ್ಜೆಗೆ ಏರಿಸುವ ಅಂಗವಾಗಿ Software ಅಭಿವೃದ್ಧಿಪಡಿಸುವ ಬಗ್ಗೆ NIC ಅಧಿಕಾರಿಗಳೊಂದಿಗೆ ಮತ್ತು ಖಾಸಗಿ ಸಂಸ್ಥೆಗಳೊಂದಿಗೆ ಚರ್ಚಿಸಲಾಗಿರುತ್ತದೆ. ಈ ಪ್ರಯುಕ್ತ Software ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳುವುದು. |
| (ಉ) | ರಾಜ್ಯದಲ್ಲಿ ಎಷ್ಟು ಆಸ್ಪತ್ರೆಗಳು ಆರೋಗ್ಯ ರಕ್ಷಣಾ ಸೌಲಭ್ಯಗಳ (HCF) ಹಾಗೂ ಅವುಗಳ ವಿರುದ್ಧ ಕೈಗೊಂಡ ಕ್ರಮಗಳೇನು? (ಆಸ್ಪತ್ರೆ ಹೆಸರು ಮತ್ತುವಿಳಾಸದೊಂದಿಗೆ ಮಾಹಿತಿ ನೀಡುವುದು) | ಸಾಮೂಹಿಕ ಜೈವಿಕ ತ್ಯಾಜ್ಯ ವಿಲೇವಾರಿ ಘಟಕಗಳೊಂದಿಗೆ ಒಪ್ಪಂದ ಮಾಡಿಕೊಂಡ ನಂತರವೇ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಆಸ್ಪತ್ರೆಗಳಿಗೆ ಸಮ್ಮತಿ ಮತ್ತು ಅಧಿಕಾರ ಪತ್ರವನ್ನು ನೀಡುತ್ತಿರುವ ಕಾರಣ ಒಪ್ಪಂದ ಮಾಡಿಕೊಳ್ಳದ ಆಸ್ಪತ್ರೆಗಳು ಕಂಡು ಬಂದಿರುವುದಿಲ್ಲ. |

**ಅಪಜೀ134ಇಎನ್‌ಜಿ 2025**

(signature)

**(ಈಶ್ವರ ಬಿ. ಖಂಡ್ರೆ)**

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು